**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1123/24**

| | | |
|---|---|---|
| ಸಾಕ್ಷಿದಾರರ ಹೆಸರು | : ಸುಕನ್ಯ ಬಿ.ವಿ | ಪ್ರಾಸಾ-1 |
| ಗಂಡನ ಹೆಸರು | : ವಸಂತ್ ಕುಮಾರ್ | ಚಾಸಾ-1 |
| ವಯಸ್ಸು | : 37 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಗೃಹಿಣಿ | ದಿನಾಂಕಃ 04.09.2025 |
| ವಾಸಸ್ಥಳ | : ಬೇಲೂರು | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯು ನನ್ನ ತಮ್ಮ. ಚಾಸಾ-2 ರವರು ನನ್ನ ತಂದೆ. ಚಾಸಾ-3 ನನ್ನ ಗಂಡ.

ದಿ.26.11.2023 ರಂದು ನನ್ನ ತಂದೆಯ ಆಸ್ತಿ ವಿಚಾರವಾಗಿ ಪಲ್ಗುಣಿಯಲ್ಲಿರುವ ಪದ್ಮತಮ್ಮ ದೇವಸ್ಥಾನದ ಬಳಿ ಒಂದು ರಾಜಿ ಪಂಚಾಯ್ತಿ ಆಗಿರುತ್ತದೆ. ಸದರಿ ರಾಜಿ ಪಂಚಾಯ್ತಿಯಲ್ಲಿ ಆರೋಪಿಗೆ 55 ಲಕ್ಷ ನೀಡಿದ ನಂತರ ಆರೋಪಿಯು ಚಾಸಾ-2 ರವರ ಜಮೀನಿನ ವಿಷಯವಾಗಿ ತಕರಾರು ಮಾಡಬಾರದು ಎಂದು ಮಾತಾಗಿರುತ್ತದೆ. ಸದರಿ ಮಾತುಕತೆಗೆ ಆರೋಪಿಯು ಒಪ್ಪಿ ತನ್ನ ಹೆಂಡತಿ ಮಕ್ಕಳಿಂದ ಪ್ರತ್ಯೇಕಗೊಂಡು ವಾಸಿಸುವುದಾಗಿಯೂ ತಿಳಿಸಿರುತ್ತಾರೆ. ನಂತರ ಸ್ವಲ್ಪ ಸಮಯದ ಬಳಿ ನಾನು ಸದರಿ ರಾಜಿ ಸಂದಾನಕ್ಕೆ ಒಪ್ಪಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ದಿ.28.11.2023 ರಂದು ನಾನು ಬಜಾಜ್ ಫಿನಾನ್ಸ್ ನಿಂದ ಸಾಲ ಪಡೆಯಲು ಹೋಗಿದ್ದು, ಸದರಿ ಸಾಲದ ಬಾಬ್ತು ನಮ್ಮ ಮನೆಯ ಫೋಟೋವನ್ನು ತೆಗೆಯಲು ನಾನು ಫೈನಾನ್ಸ್ ನವರೊಟ್ಟಿಗೆ ಪಲ್ಗುಣಿಯಲ್ಲಿರುವ ನಮ್ಮ ಮನೆಯ ಬಳಿ ತೆರಳಿದ್ದಾಗ, ನನ್ನನು ಮನೆಯ ಒಳಗೆ ಹೋಗಲು ಬಿಡದೆ ಆರೋಪಿಯು ನಾನು ನ್ಯಾಯಾಲಾಯದಿಂದ ತಡೆಯಾಜ್ಞೆಯನ್ನು ತಂದಿದ್ದು, ನೀನು ಒಳಗೆ ಬರುವಂತಿಲ್ಲ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ. ನಂತರ ನನಗೆ ಕೈ ನಿಂದ ಥಳಿಸಿ, ಕತ್ತಿಯಿಂದ ನನ್ನ ಎಡಗೈ ಗೆ ಹೊಡೆದು, ತನ್ನ ಕಾಲಿನಲ್ಲಿ ಒದ್ದು, ಓಡಾಡಿಸಿಕೊಂಡು ನನ್ನ ತಲೆಗೆ ಹೊಡೆದಿರುತ್ತಾರೆ. ನಂತರ ನನ್ನನ್ನು ಬಿಡಿಸಲು ಬಂದ ಚಾಸಾ-2 ರವರಿಗೂ ಹೊಡೆದು ಕೆಳಗೆ ತಳ್ಳಿ ತನ್ನ ಕಾಲಿನಲ್ಲಿ ಒದ್ದಿರುತ್ತಾರೆ. ನಂತರ ಅಲ್ಲಿಯೇ ಇದ್ದ ಚಾಸಾ-3 ರವರು ಬಂದು ಜಗಳವನ್ನು ಬಿಡಿಸಿ ಆರೋಪಿಯ ಕೈನಲ್ಲಿ ಇದ್ದ ಕತ್ತಿಯನ್ನು ಎಸೆದಿರುತ್ತಾರೆ. ನಂತರ ಚಾಸಾ-3 ರವರು ತಮ್ಮ ಕಾರಿನಲ್ಲಿ ನನ್ನನ್ನು ಹಾಗೂ ಚಾಸಾ-2 ರವರನ್ನು ಮೂಡಿಗೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಮತ್ತು ಹೆಚ್ಚಿನ ಚಿಕಿತ್ಸೆಗಾಗಿ ಅಲ್ಲಿಂದ ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಡಲಾಗಿರುತ್ತದೆ. ನಂತರ ಅದೇ ದಿನ ರಾ.9.30 ರ ಸಮಯಕ್ಕೆ ಬಣಕಲ್ ಪೋಲಿಸ್ ಠಾಣೆಯಿಂದ ವರದಿಯನ್ನು ಪಡೆಯಲು ಪೋಲಿಸರು ಆಸ್ಪತ್ರೆಗೆ ಬಂದಿರುತ್ತಾರೆ.

ಗಲಾಟೆಯು ಮ.2.30 ರಿಂದ 3.30 ರ ಸಮಯದಲ್ಲಿ ನಡೆದಿರುತ್ತದೆ. ನಂತರ ದಿ.29.11.2023 ರಂದು ಮ.2.30 ರಿಂದ 3.00 ರ ಸಮಯದಲ್ಲಿ ನಾವು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಲಾಗಿರುತ್ತದೆ. ಅದೇ ದಿನ ಸ.5.00. ರಿಂದ 5.30 ರ ಸಮಯದವರೆಗೂ ಪೋಲಿಸರು ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ. ಸದರಿ ಸಮಯದಲ್ಲಿ ಚಾಸಾ-5, 6 ಮತ್ತು ಕೆಲವು ಪೋಲಿಸ್ ಅಧಿಕಾರಿಗಳು ಹಾಜರಿದ್ದರು. ಸದರಿ ಸಮಯದಲ್ಲಿ ಒಂದು ಕತ್ತಿಯನ್ನು ಪೋಲಿಸರು ವಶಪಡಿಸಿಕೊಂಡಿರುತ್ತಾರೆ ಮತ್ತು ಫೋಟೋಗಳನ್ನು ತೆಗೆಯಲಾಗಿರುತ್ತದೆ.

ಸಾಕ್ಷಿಯು ದಿ.28.11.2023 ರಂದು ನೀಡಿದಂತಹ ದೂರಿನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ-1, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.29.11.2023 ರಂದು ಜರುಗಿಸಿದ ಮಹಜರ್ ಕ್ರಮದ ಪ್ರತಿಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ಪ್ರತಿಯನ್ನು ನಿಪಿ-2, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 2 ಫೋಟೋಗಳಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಸದರಿ ಫೋಟೋಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಕತ್ತಿಯನ್ನು ನೋಡಿ ಆ ದಿನ ಆರೋಪಿಯು ಅವರನ್ನು ಥಳಿಸಲು ಉಪಯೋಗಿಸಿದ ಕತ್ತಿ ಎಂದು ಗುರುತಿಸಿದ್ದು, ಅದನ್ನು ಎಂ.ಒ.1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಮ್.ಎಮ್.ಆರ್. ವಕೀಲರಿಂದಃ**

ಆರೋಪಿಯ ವಿರುದ್ಧ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 7/2024 ರಡಿಯಲ್ಲಿ ವಿಭಾಗವನ್ನು ಕೋರಿ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ಆರೋಪಿಯು ಸುಮಾರು 14 ರಿಂದ 15 ವರ್ಷಗಳಿಂದ ಸ್ವಾಧೀನಾನುಭವದಲ್ಲಿರುತ್ತಾರೆ. ಸದರಿ ಸ್ವತ್ತನ್ನು ಚಾಸಾ-2 ಮತ್ತು ಆರೋಪಿಯು ಸೇರಿ ಅಭಿವೃದ್ಧಿ ಮಾಡುತ್ತಿರುತ್ತಾರೆ. 2024 ರ ಸಾಲಿನಲ್ಲಿ ನಾನು ಚಾಸಾ-3 ರವರನ್ನು ವಿವಾಹವಾಗಿರುತ್ತೇನೆ. ನನ್ನ ಮದುವೆಗೆ ಆರೋಪಿಯನ್ನು ಕರೆದಿರುವುದಿಲ್ಲ. ನನ್ನ ಮತ್ತು ಆರೋಪಿಯ ವಿರುದ್ಧ ಕಳೆದ 4 ವರ್ಷದಿಂದ ವೈಮನಸ್ಸಿರುತ್ತದೆ. ಚಾಸಾ-3 ಮತ್ತು 6 ರವರು ಒಂದೇ ಊರಿನವರು ಎಂದರೆ ಸರಿ. ಚಾಸಾ-6 ರವರನ್ನು ಮಹಜರ್ ಕ್ರಮವನ್ನು ಜರುಗಿಸಲು ಚಾಸಾ-3 ರವರು ಪಂಚರಾಗಿ ಕರೆದುಕೊಂಡು ಬಂದಿರುತ್ತಾರೆ. ಚಾಸಾ-5 ನನ್ನ ಅಕ್ಕ. ಸದರಿಯವರು ಅಸಲು ದಾವಾ ಸಂಖ್ಯೆ 7/2024 ರಲ್ಲಿ ಪಕ್ಷಗಾರರಾಗಿರುತ್ತಾರೆ. 2023-24 ನೇ ಸಾಲಿನಲ್ಲಿ ನಾನು ಬಣಕಲ್ ನಲ್ಲಿ ನನ್ನ ತಂದೆ-ತಾಯಿಯೊಂದಿಗೆ ವಾಸವಾಗಿರುತ್ತೇನೆ. ನಾನು 2021 ನೇ ಸಾಲಿನಿಂದಲೂ ಬಣಕಲ್ ನ ಬಾಡಿಗೆ ಮನೆಯಲ್ಲಿ ವಾಸಿಸುತ್ತಿರುತ್ತೇನೆ. ನಜೀರ್ ಎಂಬುವವರು ಸದರಿ ಮನೆಯ ಮಾಲೀಕರಾಗಿರುತ್ತಾರೆ.

ನಾನು ಮತ್ತು ಚಾಸಾ-3 ರವರು ಪ್ರೀತಿಸಿ ಮನೆಯಲ್ಲಿ ತಿಳಿಸಿ ಮದುವೆಯಾಗಿರುತ್ತೇವೆ.

2023 ನೇ ಸಾಲಿನಿಂದ ನಾನು ಚಾಸಾ-3 ರವರನ್ನು ಪ್ರೀತಿಸುತ್ತಿರುತ್ತೇನೆ. ನನ್ನ ಮತ್ತು ಚಾಸಾ-3 ರವರ ಮದುವೆಗೆ ಆರೋಪಿಯು ಸಮ್ಮತಿ ನೀಡಿರುತ್ತಾರೆ. ನನ್ನ ಮತ್ತು ಚಾಸಾ-3 ರವರ ಮದುವೆಗೆ ಆರೋಪಿಯು ಒಪ್ಪದೇ ಇದ್ದ ಕಾರಣ ನನಗೆ ಅವರ ಮೇಲೆ ದ್ವೇಷ ಇತ್ತು ಎಂದರೆ ಸರಿಯಲ್ಲ. ನಾನು ದಿ.28.11.2023 ರಂದು ನಾನು ಫೈನಾನ್ಸ್ ನಲ್ಲಿ ಸಾಲವನ್ನು ಕೇಳಿ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಆ ದಿನ ನನ್ನೊಟ್ಟಿಗೆ ಫೈನಾನ್ಸ್ ನ ಸದಸ್ಯನಾಗಿದ್ದ ಮಿಥುನ್ ಎಂಬುವವರ ಬಂದಿರುತ್ತಾರೆ. ಆರೋಪಿಯು ನನ್ನೊಟ್ಟಿಗೆ ಜಗಳ ಮಾಡಿದ ದಿನ ಮಿಥುನ್ ರವರು ಸ್ಥಳದಲ್ಲಿಯೇ ಇದ್ದರು. ಅವರನ್ನೂ ಸಹಾ ಪ್ರಸ್ತುತ ಪ್ರಕರಣದಲ್ಲಿ ಸಾಕ್ಷಿಯನ್ನಾಗಿ ಮಾಡಿರುತ್ತಾರೆ. ಆ ದಿನ ಫೈನಾನ್ಸ್ ರವರೊಟ್ಟಿಗೆ ಮ.2.30 ರಿಂದ 3.00 ರ ಸಮಯಕ್ಕೆ ನನ್ನ ಮನೆಯ ಬಳಿ ಫೋಟೋ ತೆಗೆಯಲು ಹೋಗಿರುತ್ತೇವೆ. ನಾನು ಫೈನಾನ್ಸ್ ನಲ್ಲಿ ನನ್ನ ಖಾಸಗಿ ವಿಷಯಕ್ಕಾಗಿ ಸಾಲವನ್ನು ಕೇಳಿರುತ್ತೇನೆ. ಸಾಲವನ್ನು ನೀಡಲು ಆಧಾರವಾಗಿ ಮನೆಯ ಫೋಟೋ ಬೇಕು ಎಂದು ಹೇಳಿದ ಕಾರಣ ನಾನು ಆ ದಿನ ಮನೆಯ ಬಳಿ ಫೋಟೋ ಪಡೆದುಕೊಳ್ಳಲು ಹೋಗಿರುತ್ತೇನೆ. ಸದರಿ ಮನೆಯ ಚಾಸಾ-2 ರವರ ಹೆಸರಿನಲ್ಲಿರುತ್ತದೆ.

ಚಾಸಾ-2 ರವರು ನನ್ನೊಟ್ಟಿಗೆ ಬಣಕಲ್ ನಿಂದ ಪಲ್ಗುಣಿಗೆ ಬಂದಿರುತ್ತಾರೆ. ಚಾಸಾ-2 ರವರು ಕುಲುಮೆ ಕೆಲಸ ಮಾಡುತ್ತಾರೆ. ಆ ದಿನ ಚಾಸಾ-2 ರವರು ನನ್ನೊಟ್ಟಿಗೆ ಬಂದಿರುತ್ತಾರೆ. ಆ ದಿನ ಬಣಕಲ್ ನಿಂದ ಮ.1.30 ರ ಸಮಯಕ್ಕೆ ಹೊರಟಿರುತ್ತೇವೆ. ಬಣಕಲ್ ನಿಂದ ಪಲ್ಗುಣಿಗೆ 10 ನಿಮಿಷ ಸಮಯವಾಗುತ್ತದೆ ಎಂದರೆ ಸರಿಯಲ್ಲ. ರಾಜಿ ಸಂದಾನವಾದ ನಂತರ ಆರೋಪಿಗೆ ಯಾವುದೇ ಹಣವನ್ನು ನೀಡಿರಲಿಲ್ಲ. ಸದರಿ ರಾಜಿ ಸಂದಾನದಲ್ಲಿ ಒಪ್ಪಿಗೆಯಾದ ಹಣವನ್ನು ನಾನೇ ಆರೋಪಿಗೆ ಕೊಡಲು ನಿರಾಕರಿಸಿ ಅವರ ಮೇಲೆ ನಾನೇ ಹಲ್ಲೆ ಮಾಡಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಅಭಿವೃದ್ಧಿ ಮಾಡಿದಂತಹ ತೋಟದ ಮೇಲೆ ನನಗೆ ಆಸೆಯಿತ್ತು ಎಂದರೆ ಸರಿಯಲ್ಲ. ಮನೆ ಕಟ್ಟಲು ಚಾಸಾ-2 ರವರು ರೂ.8,00,000/- ಸಾಲ ಪಡೆದುಕೊಂಡಿದ್ದು, ಪ್ರಸ್ತುತವಾಗಿಯೂ ಮನೆಯ ಮೇಲೆ 11,50,000/- ಸಾಲ ಬಾಕಿ ಇರುತ್ತದೆ. ಆರೋಪಿಯು ಸದರಿ ಸಾಲದ ಹಲವು ಕಂತುಗಳನ್ನು ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ದಿ.28.11.2023 ರಂದು ಹಲ್ಲೆಯಾದ ನಂತರ ಮ.3.15 ರ ಸಮಯಕ್ಕೆ ಚಾಸಾ-3 ರವರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಚಾಸಾ-2 ರವರು ಕುಲುಮೆ ಕೆಲಸ ಮಾಡುವುದರಿಂದ ಎಂ.ಒ.1 ರಂತಹ ವಸ್ತುಗಳನ್ನು ತಯಾರಿಸುತ್ತಾರೆ ಎಂದರೆ ಸರಿ.

ಸದರಿ ಎಂ.ಒ.1 ನನ್ನ ತಂದೆಯೇ ತಯಾರಿಸುತ್ತಾರೆ ಎಂದರೆ ಸರಿ. ಆರೋಪಿಯು ಮಾಡಿದ ಹಲ್ಲೆಯಲ್ಲಿ ನನಗೆ ರಕ್ತ ಗಾಯವಾಗಿತ್ತು ಮತ್ತು ನಾನು ಆ ದಿನ ಧರಿಸಿದ್ಧ ಬಟ್ಟೆಯು ರಕ್ತಸಿಕ್ತವಾಗಿರುತ್ತದೆ. ಸದರಿ ವಿಷಯದ ಕುರಿತು ನನ್ನ ದೂರಿನಲ್ಲಿ ನಮೂದು ಮಾಡಲಾಗಿರುವುದಿಲ್ಲ. ಮಹಜರ್ ಕ್ರಮ ಜರುಗಿಸುವ ಸಮಯದಲ್ಲಿ ಪೋಲಿಸರು ಹಲ್ಲೆಯ ಸಮಯದಲ್ಲಿ ನಾನು ಧರಿಸಿದ್ದ ಬಟ್ಟೆಗಳನ್ನು ವಶಪಡಿಸಿಕೊಂಡಿರುವುದಿಲ್ಲ. ಆರೋಪಿಯು ಯಾವುದೇ ಹಲ್ಲೆ ಮಾಡದಿದ್ದರೂ ನಾನು ಅವರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ಆರೋಪಿಯು ಹಲ್ಲೆ ಮಾಡಿದ್ದರೆ ಮತ್ತು ನನ್ನ ಬಟ್ಟೆಯು ರಕ್ತಸಿಕ್ತವಾಗಿದ್ದರೆ

ಮಹಜರ್ ಸಮಯದಲ್ಲಿ ನಾನು ಅದನ್ನು ಪೋಲಿಸರಿಗೆ ನೀಡುತ್ತಿದ್ದೆ ಎಂದರೆ ಸಾಕ್ಷಿಯು ನಾನು ಆಸ್ಪತ್ರೆಗೆ ಹೋದ ಸಮಯದಲ್ಲಿ ನಾನು ಧರಿಸಿದ್ದ ಬಟ್ಟೆಯನ್ನು ಹೊರತುಪಡಿಸಿದ ಇತರ ಯಾವುದೇ ಬಟ್ಟೆ ಇರಲಿಲ್ಲ ಎಂದು ನುಡಿಯುತ್ತಾರೆ. ಚಾಸಾ-3 ರವರು ಮ 2.30 ರಿಂದ 3.00 ರ ಸಮಯಕ್ಕೆ ಘಟನಾ ಸ್ಥಳಕ್ಕೆ ಬಂದಿರುತ್ತಾರೆ. ಆ ದಿನ ಚಾಸಾ-3 ರವರೊಟ್ಟಿಗೆ ಚಾಸಾ-6 ರವರು ಬಂದಿದ್ದರು. ನಾವು ಪಲ್ಗುಣಿಯಿಂದ ಮೂಡಿಗೆರೆಯ MGM ಆಸ್ಪತ್ರೆಗೆ ಬರುವಷ್ಟರಲ್ಲಿ ಸ.4.30 ರ ಸಮಯವಾಗಿರುತ್ತದೆ.

ಸಾಮಾನ್ಯವಾಗಿ ಪಲ್ಗುಣಿಯಿಂದ ಮೂಡಿಗೆರೆಗೆ ಕೇವಲ 15 ನಿಮಿಷದಲ್ಲಿ ಬರಬಹುದು ಎಂದರೆ ಆ ದಿನ ನನ್ನನ್ನು ಮತ್ತು ಚಾಸಾ-2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಬಂದ ಕಾರಣ ತಡವಾಗಿರುತ್ತದೆ ಎಂದು ನುಡಿಯುತ್ತಾರೆ. ಚಾಸಾ-3 ರವರು ನನ್ನನ್ನು ಮತ್ತು ಚಾಸಾ-2 ರವರನ್ನು ಒಟ್ಟಿಗೆ ಕಾರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ಪಲ್ಗುಣಿಯು ಬಣಕಲ್ ಹೋಬಳಿಗೆ ಸೇರಿರುತ್ತದೆ. ಹಲ್ಲೆಯಾದ ನಂತರ ಬಣಕಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಯಾವುದಾದರೂ ತೊಂದರೆ ಇತ್ತ ಎಂದರೆ ಸಾಕ್ಷಿಯು ತೀವ್ರ ಗಾಯಗೊಂಡ ಕಾರಣ ಮೂಡಿಗೆರೆ ಆಸ್ಪತ್ರೆಗೆ ಬಂದಿರುತ್ತೇವೆ ಎಂದು ನುಡಿಯುತ್ತಾರೆ. ಚಾಸಾ-2 ರವರ ಬಲ ಗೈ ಮತ್ತು ಬಲಗಾಲಿಗೆ ಪೆಟ್ಟಾಗಿರುತ್ತದೆ. ಹಲ್ಲೆಯಾದ ಸಂದರ್ಭದಲ್ಲಿ ಆರೋಪಿಯು ಬೈದ ಕಾರಣ ಚಾಸಾ-4 ರವರು ಜಗಳ ಬಿಡಿಸಲು ಬಂದಿರುವುದಿಲ್ಲ, ಚಾಸಾ-3 ರವರು ಮಾತ್ರ ಜಗಳ ಬಿಡಿಸಿರುತ್ತಾರೆ. ನಾನು ಹೇಳಿದಂತೆ ಯಾವುದೇ ಕೃತ್ಯ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಮೂಡಿಗೆರೆಯ ಆಸ್ಪತ್ರೆಯಲ್ಲಿ ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನನಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರು ತಿಳಿದಿರುವುದಿಲ್ಲ. ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ವೈದ್ಯರ ಹೆಸರು ನನಗೆ ತಿಳಿದಿರುವುದಿಲ್ಲ.

ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಗೆ ಸ.6.00 ರ ಸಮಯಕ್ಕೆ ತೆರಳಿರುತ್ತೇವೆ. ಸದರಿ ಆಸ್ಪತ್ರೆಯಲ್ಲಿ ನಾನು ಒಂದು ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಆ ದಿನ ಪೋಲಿಸರು ನಮಗೆ ದೂರವಾಣಿ ಕರೆ ಮಾಡಿ ಆಸ್ಪತ್ರೆಗೆ ಬಂದಿರುತ್ತಾರೆ. ಚಾಸಾ-2 ರವರು ಗಲಾಟೆಯ ಕುರಿತು ಪೋಲಿಸರಿಗೆ ಮಾಹಿತಿಯನ್ನು ನೀಡಿರುತ್ತಾರೆ. ಚಾಸಾ-2 ರವರು ಮೂಡಿಗೆರೆ ಮತ್ತು ಚಿಕ್ಕಮಗಳೂರಿನಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಅವರಿಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರು ನನಗೆ ತಿಳಿದಿರುವುದಿಲ್ಲ. ನಾನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ನಂತರ ಮ.3.30 ರ ಸಮಯಕ್ಕೆ ಬಣಕಲ್ ನಲ್ಲಿರುವ ಮನೆಗೆ ತಲುಪಿರುತ್ತೇನೆ. ಆ ದಿನ 5.30 ರ ಸಮಯಕ್ಕೆ ಮಹಜರ್ ಕ್ರಮ ಜರುಗಿಸಲಾಗಿರುತ್ತದೆ ಅಲ್ಲಿಯವರೆಗೂ ನಾನು ಬಣಕಲ್ ನ ಮನೆಯಲ್ಲಿಯೇ ಇರುತ್ತೇನೆ. ಚಾಸಾ-2 ರವರೂ ಸಹ ನನ್ನೊಟ್ಟಿಗೆ ಅಲ್ಲಿಯೇ ಇರುತ್ತಾರೆ. ಚಾಸಾ-13 ರವರು ನನಗೆ ಮಹಜರ್ ಕ್ರಮವನ್ನು ಜರುಗಿಸಲು ಘಟನಾ ಸ್ಥಳಕ್ಕೆ ಬರುವಂತೆ ತಿಳಿಸಿರುತ್ತಾರೆ. ಚಾಸಾ-3 ಮತ್ತು 6 ರವರನ್ನು ಘಟನಾ ಸ್ಥಳಕ್ಕೆ ನಾನೇ ಕರೆದುಕೊಂಡು ಬಂದಿರುತ್ತೇನೆ. ನಾವು ಮಹಜರ್ ಕ್ರಮದ ಪೂರ್ದಲ್ಲಿಯೇ ತಿಳಿಸಿದ ಕಾರಣ ಚಾಸಾ-3 ಮತ್ತು 6 ರವರು ಘಟನಾ ಸ್ಥಳಕ್ಕೆ ಸ.5.00 ರಿಂದ 5.30 ರ ಸಮಯಕ್ಕೆ

ಬಂದಿರುತ್ತಾರೆ.

ಹಲ್ಲೆಯ ನಂತರ ಎಂ.ಒ.1 ನ್ನು ಆರೋಪಿಯೇ ಪಕ್ಕದಲ್ಲಿದ್ದ ತೋಟದಲ್ಲಿ ಎಸೆದಿರುತ್ತಾರೆ. ಸದರಿ ಸ್ಥಳದಲ್ಲಿಯೇ ಮಹಜರ್ ಕ್ರಮವನ್ನು ಜರುಗಿಸಿ ಫೋಟೋವನ್ನು ತೆಗೆಯಲಾಗಿರುತ್ತದೆ. ಸದರಿ ಫೋಟೋಗಳನ್ನು ಯಾವ ಪೋಲಿಸ್ ಅಧಿಕಾರಿ ತೆಗೆದಿರುತ್ತಾರೆ ಎಂದು ಹೇಳಲಾಗುವುದಿಲ್ಲ. ಸದರಿ ಸಮಯದಲ್ಲಿ ನಾನು, ಚಾಸಾ-13 ಮತ್ತು ಚಾಸಾ-6 ರವರು ಹಾಜರಿರುತ್ತೇವೆ. ಗಲಾಟೆಯು ಮನೆಯ ಗೇಟಿನ ಹೊರಗೆ ನಡೆದಿರುತ್ತದೆ. ಸದರಿ ಮನೆಯ ಮುಂದೆ ಒಂದು ರಸ್ತೆ ಇರುತ್ತದೆ. ಆರೋಪಿಯು ಹಲ್ಲೆ ಮಾಡಿದ ಬಾಬ್ತು ನೆಲದ ಮೇಲೆ ರಕ್ತದ ಕುರುಹುಗಳು ಇತ್ತು. ನಿಪಿ-3 ಮತ್ತು 4 ರಲ್ಲಿ ಯಾವುದೇ ರಕ್ತದ ಕಲೆಗಳು ಕಾಣುತ್ತಿಲ್ಲ ಎಂದರೆ ಸರಿ. ನನಗೆ ಯಾವುದೇ ರಕ್ತ ಸಿಕ್ತದ ಗಾಯಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಮುಂದೆ ಆಸ್ಪತ್ರೆಯಲ್ಲಿ ಚಾಸಾ-2 ರವರು ಹೇಳಿಕೆಯನ್ನು ನೀಡಿರುತ್ತಾರೆ. ಸದರಿಯವರ ಹೇಳಿಕೆಯಲ್ಲಿ ಯಾವುದೇ ತಿದ್ದುಪಡಿಯಾಗಿರುವುದಿಲ್ಲ. ಆದರೆ ನಿಪಿ-1 ರಲ್ಲಿ ತಿದ್ದುಪಡಿಯಾಗಿರುವುದು ಕಂಡುಬರುತ್ತಿದೆ ಎಂದರೆ ಸರಿ. ಅದೇ ರೀತಿ ನಿಪಿ-1 ರ ಎರಡನೇ ಪುಟದಲ್ಲಿಯೂ ತಿದ್ದುಪಡಿಯಾಗಿರುತ್ತದೆ ಎಂದರೆ ಸರಿ. ನಾನು ನೀಡಿರುವಂತಹ ಹೇಳಿಕೆಯನ್ನು ಪ್ರಸ್ತುತ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

ಪೋಲಿಸರೇ ಮಹಜರ್ ಕ್ರಮವನ್ನು ಬರವಣಿಗೆ ಮಾಡಿರುತ್ತಾರೆ. ಸದರಿ ಮಹಜರ್ ನಲ್ಲಿ ನಾನು ಎರಡು ಸಹಿಯನ್ನು ಮಾಡಿರುತ್ತೇನೆ. ಮಹಜರ್ ಗೆ ಹಾಜರಾಗುವಂತೆ ಪೋಲಿಸರು ಯಾವುದೇ ನೋಟೀಸ್ ಜಾರಿ ಮಾಡಿರುವುದಿಲ್ಲ. ಅದೇ ರೀತಿ ಚಾಸಾ-3 ಮತ್ತು 6 ರವರಿಗೂ ಯಾವುದೇ ನೋಟೀಸ್ ಜಾರಿ ಮಾಡಿರುವುದಿಲ್ಲ. ಸದರಿ ಮಹಜರ್ ಕ್ರಮವು 2 ಪುಟದಲ್ಲಿ ಬರೆಯಲಾಗಿರುತ್ತದೆ. ಸದರಿ 2 ಪುಟದಲ್ಲಿಯೂ ನನ್ನ ಸಹಿ ಇರುತ್ತದೆ ಎಂದರೆ ಸರಿ. ಸದರಿ ಮಹಜರ್ ನ ಚೆಕ್ಕುಬಂದಿಯೂ ಉತ್ತರಕ್ಕೆ ಪಂಚಾಯ್ತಿ ರಸ್ತೆ, ಪಶ್ಚಿಮಕ್ಕೆ ಪಂಚಾಯ್ತಿ ರಸ್ತೆ, ದಕ್ಷಿಣಕ್ಕೆ ಜಾಣಯ್ಯ ಎಂಬುವರ ತೋಟ ಮತ್ತು ಪೂರ್ವಕ್ಕೆ ಚಾಸಾ-2 ರವರ ಮನೆ ಬರುತ್ತದೆ. ಸದರಿ ಚೆಕ್ಕುಬಂದಿಯನ್ನು ಮಹಜರ್ ನಲ್ಲಿ ನಮೂದು ಮಾಡಲಾಗಿರುತ್ತದೆ. ಸದರಿ ಮಹಜರ್ ಕ್ರಮವನ್ನು ಠಾಣೆಯಲ್ಲಿಯೇ ಬರೆಯಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-3 ಮತ್ತು 4 ನ್ನು ಪ್ರಸ್ತುತ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿಯನ್ನು ಮನೆಯಿಂದ ಹೊರಹಾಕಿ ಸದರಿ ಮನೆಯನ್ನು ಪಡೆದುಕೊಳ್ಳುವ ದುರುದ್ದೇಶದಿಂದ ನಾನು ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ  ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್  ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.